8/

## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **289 (335)**
ಉತ್ತರಿಸಬೇಕಾದ ದಿನಾಂಕ : 29.01.2026
ಸದಸ್ಯರ ಹೆಸರು : ಡಾ: ಯತೀಂದ್ರ ಎಸ್. (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರು ಜಿಲ್ಲೆಯಲ್ಲಿ ಪುರುಷ ಕ್ರೀಡಾಪಟುಗಳಿಗೆ ಕೇವಲ 5ನೇ ತರಗತಿಯಿಂದ 10ನೇ ತರಗತಿಯವರೆಗಿನ ಮಾತ್ರ ವಸತಿ ನಿಲಯದ ವ್ಯವಸ್ಥೆಯಿರುವುದರಿಂದ ಪುರುಷ ಕ್ರೀಡಾಪಟುಗಳಿಗೆ ಕ್ರೀಡಾಭ್ಯಾಸವನ್ನು ಮುಂದುವರೆಸಲು ಸಮಸ್ಯೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಬಂದಿದ್ದಲ್ಲಿ, ಪುರುಷ ಕ್ರೀಡಾಪಟುಗಳಿಗೆ ಪ್ರತ್ಯೇಕ ಕ್ರೀಡಾ ವಸತಿ ನಿಲಯವನ್ನು ನಿರ್ಮಾಣ ಮಾಡಲು ಜಾಗವನ್ನು ಒದಗಿಸಲಾಗಿದೆಯೇ; ಕಟ್ಟಡ ನಿರ್ಮಾಣಕ್ಕೆ ಎಷ್ಟು ಅನುದಾನವನ್ನು ಒದಗಿಸಲಾಗುತ್ತಿದೆ; ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆಯೇ? (ವಿವರ ಒದಗಿಸುವುದು) | ಮೈಸೂರಿನ ಕ್ರೀಡಾ ವಸತಿ ನಿಲಯದಲ್ಲಿ ಬಾಲಕರಿಗೆ ಅಥ್ಲೆಟಿಕ್ಸ್ ಮತ್ತು ಜಿಮ್ನಾಸ್ಟಿಕ್ಸ್ ಕ್ರೀಡೆಯಲ್ಲಿ 5ನೇ ತರಗತಿಯಿಂದ 7ನೇ ತರಗತಿಯವರೆಗೆ ಪ್ರವೇಶಾವಕಾಶ ಕಲ್ಪಿಸಲಾಗಿದೆ.<br><br>ಪುರುಷ ಕ್ರೀಡಾಪಟುಗಳಿಗೆ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಪ್ರತ್ಯೇಕ ಕ್ರೀಡಾ ವಸತಿ ನಿಲಯದ ಕಟ್ಟಡ ಲಭ್ಯವಿರುತ್ತದೆ. ಈಗಾಗಲೇ ಮಂಜೂರಾಗಿರುವ ಪ್ರವೇಶಬಲಕ್ಕೆ ಅನುಗುಣವಾಗಿ ಬಾಲಕರು ಮತ್ತು ಬಾಲಕಿಯರು/ ಮಹಿಳಾ ಕ್ರೀಡಾಪಟುಗಳಿಗೆ ಪ್ರತ್ಯೇಕ ವಸತಿ ನಿಲಯ ಕಟ್ಟಡ ಲಭ್ಯವಿರುತ್ತದೆ.<br><br>2025-26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-401ರಲ್ಲಿ, ಮೈಸೂರಿನಲ್ಲಿ, ಕುಸ್ತಿ, ವಾಲಿಬಾಲ್, ಖೋ-ಖೋ ಅಕಾಡೆಮಿಗಳನ್ನು ಸ್ಥಾಪಿಸಲು ರೂ.2.00 ಕೋಟಿ ಒದಗಿಸಲಾಗುವುದು ಎಂದು ಘೋಷಿಸಲಾಗಿದೆ. ಮೈಸೂರಿನ ಸಾತಗಳ್ಳಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸಮೀಪ ಒಟ್ಟು 25.28 ಎಕರೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ನಿವೇಶನವನ್ನು ಗುರುತಿಸಲಾಗಿದೆ. ನಿವೇಶನವು ಇಲಾಖೆಗೆ ಮಂಜೂರಾಗಿ ಹಸ್ತಾಂತರಗೊಂಡ ನಂತರ ಹಿರಿಯರ ವಿಭಾಗದ ಪುರುಷರ ಕ್ರೀಡಾ ವಿಭಾಗಗಳನ್ನು ಮೈಸೂರಿನಲ್ಲಿ ಆರಂಭಿಸುವ ಬಗ್ಗೆ ನಿಯಮಾನುಸಾರ ಪರಿಗಣಿಸಲಾಗುವುದು. |

**ಸಂಖ್ಯೆ:ವೈಎಸ್‌ಡಿ-ಇಬಿಬಿ/16/2026**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ